# ಅಧ್ಯಾಯ–I ಸಾಮಾನ್ಯ

## 1.1 ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ

2015–16 ಸಾಲಿನಲ್ಲಿ ಕರ್ನಾಟಕ ಸರ್ಕಾರವು ಸಂಗ್ರಹಿಸಿದ ತೆರಿಗೆ ಮತ್ತು ತೆರಿಗೆಯೇತರ ರಾಜಸ್ವ/ವರಮಾನ, ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರದ ವಿಭಜನೀಯ ತೆರಿಗೆಗಳಿಗೆ ಸಂಬಂಧಿಸಿದಂತೆ ರಾಜ್ಯದ ಪಾಲು ಮತ್ತು ಭಾರತ ಸರ್ಕಾರದಿಂದ ಸ್ವೀಕರಿಸಲಾದಂತಹ ಅನುದಾನಗಳು ಹಾಗೂ ತತ್ಸಂಬಂಧಿತ ಹಿಂದಿನ ನಾಲ್ಕು ವರ್ಷಗಳ ಅಂಕಿ–ಸಂಖ್ಯೆಗಳನ್ನು **ಕೋಷ್ಟಕ – 1.1.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.1.1**
**ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2011-12 | 2012-13 | 2013-14 | 2014-15 | 2015-16 |
|---|---|---|---|---|---|---|
| **1.** | ರಾಜ್ಯ ಸರ್ಕಾರವು ಸಂಗ್ರಹಿಸಿದ ರಾಜಸ್ವ/ವರಮಾನ | | | | | |
| | • ತೆರಿಗೆ ರಾಜಸ್ವ/ವರಮಾನ | 46,475.96 | 53,753.55 | 62,603.53 | 70,180.21 | **75,550.18** |
| | • ತೆರಿಗೆಯೇತರ ರಾಜಸ್ವ/ವರಮಾನ | 4,086.86 | 3,966.11 | 4,031.90 | 4,688.24 | **5,355.04** |
| | ಒಟ್ಟು | **50,562.82** | **57,719.66** | **66,635.43** | **74,868.45** | **80,905.22** |
| **2.** | ಭಾರತ ಸರ್ಕಾರದಿಂದ ಸ್ವೀಕೃತಿಗಳು | | | | | |
| | • ಕೇಂದ್ರದ ವಿಭಜನೀಯ ತೆರಿಗೆಗಳು ಮತ್ತು ಸುಂಕಗಳ ನಿವ್ವಳ ಸ್ವೀಕೃತಿಗಳ ಪಾಲು[1] | 11,075.04 | 12,647.14 | 13,808.28 | 14,654.25 | 23,983.34 |
| | • ಅನುದಾನಗಳು | 8,168.41 | 7,809.42 | 9,098.82 | 14,619.45 | 13,928.75 |
| | ಒಟ್ಟು | **19,243.45** | **20,456.56** | **22,907.10** | **29,273.70** | **37,912.09** |
| **3.** | ರಾಜ್ಯ ಸರ್ಕಾರದ ಒಟ್ಟಾರೆ ರಾಜಸ್ವ/ವರಮಾನ ಸ್ವೀಕೃತಿಗಳು (1 ಮತ್ತು 2) | **69,806.27** | **78,176.22** | **89,542.53** | **1,04,142.15** | **1,18,817.31** |
| **4.** | 3ಕ್ಕೆ ಹೋಲಿಸಿದಲ್ಲಿ 1ರ ಶೇಕಡಾವಾರು | **72** | **74** | **74** | **72** | **68** |

2015–16 ಸಾಲಿನಲ್ಲಿ ರಾಜ್ಯ ಸರ್ಕಾರವು ಗಳಿಸಿದ ರಾಜಸ್ವ/ವರಮಾನವು (₹ 80,905.22 ಕೋಟಿ) ಒಟ್ಟು ರಾಜಸ್ವ/ವರಮಾನ ಸ್ವೀಕೃತಿಗಳ ಶೇಕಡಾ 68ರಷ್ಟು ಆಗಿದ್ದಿತು ಎಂಬುದನ್ನು ಮೇಲ್ಕಂಡ ಕೋಷ್ಟಕವು ಸೂಚಿಸುತ್ತದೆ. 2015–16 ಸಾಲಿನಲ್ಲಿನ ಉಳಿದ ಶೇಕಡಾ 32ರಷ್ಟು ಸ್ವೀಕೃತಿಗಳು ಭಾರತ ಸರ್ಕಾರದಿಂದ ಬಂದಿರುವುದು.

**1.1.2** 2010–11ರಿಂದ 2015–16ರ ಅವಧಿಯಲ್ಲಿ ಸಂಗ್ರಹಿಸಲಾದಂತಹ ತೆರಿಗೆ ರಾಜಸ್ವ/ವರಮಾನದ ವಿವರಗಳನ್ನು **ಕೋಷ್ಟಕ 1.1.2**ರಲ್ಲಿ ನೀಡಲಾಗಿದೆ.

[1] 'ಎ ತೆರಿಗೆ ರಾಜಸ್ವ'ದಡಿಯಲ್ಲಿದ್ದ ಲೆಕ್ಕಪತ್ರಗಳ ಪ್ರಧಾನ ಶೀರ್ಷಿಕೆಗಳು 0020 ಸಂಸ್ಥೀಯ ತೆರಿಗೆ, 0021 – ಸಂಸ್ಥೀಯ ತೆರಿಗೆಯಲ್ಲದ ಆದಾಯದ ಮೇಲಿನ ತೆರಿಗೆಗಳು, 0032–ಐಶ್ವರ್ಯದ ಮೇಲಿನ ತೆರಿಗೆಗಳು, 0037–ಸೀಮಾ ಸುಂಕ, 0038–ಕೇಂದ್ರ ಅಬಕಾರಿ ಸುಂಕಗಳು, 0044–ಸೇವಾ ತೆರಿಗೆ, 0028 – ಆದಾಯ ಮತ್ತು ವೆಚ್ಚಗಳ ಮೇಲಿನ ಇತರೆ ತೆರಿಗೆಗಳು – ಅಪ್ರಧಾನ ಶೀರ್ಷಿಕೆ–901 ಹಾಗೂ 0045– ಸಾಮಗ್ರಿಗಳು ಮತ್ತು ಸೇವೆಗಳ ಮೇಲೆ ಇತರೆ ತೆರಿಗೆಗಳು ಮತ್ತು ಸುಂಕಗಳು – ಅಪ್ರಧಾನ ಲೆಕ್ಕಶೀರ್ಷಿಕ 901, ಇವುಗಳನ್ನು 2015–16ನೇ ಸಾಲಿಗೆ ಕರ್ನಾಟಕ ಸರ್ಕಾರದ ಹಣಕಾಸು ಲೆಕ್ಕಪತ್ರಗಳಲ್ಲಿ ದಾಖಲಿಸಿದ್ದಂತೆ ರಾಜ್ಯಗಳಿಗೆ ಹಂಚಿಕೆ ಮಾಡಲಾಗಿದ್ದ ನಿವ್ವಳ ಸ್ವೀಕೃತಿಗಳ ಪಾಲು, ಇವುಗಳ ಅಡಿಯಲ್ಲಿನ ಅಂಕಿಸಂಖ್ಯೆಗಳನ್ನು ರಾಜ್ಯ ಸರ್ಕಾರ ಗಳಿಸಿದ ತೆರಿಗೆಗಳಿಂದ ಪ್ರತ್ಯೇಕಿಸಿ ಕೇಂದ್ರದ ವಿಭಜನೀಯ ತೆರಿಗೆಗಳು ಮತ್ತು ಸುಂಕಗಳ ನಿವ್ವಳ ಸ್ವೀಕೃತಿಗಳ ಪಾಲಿನಲ್ಲಿ ಸೇರಿಸಲಾಗಿದೆ.

**ಕೋಷ್ಟಕ 1.1.2**
**ತೆರಿಗೆ ರಾಜಸ್ವ/ವರಮಾನ ಸ್ವೀಕೃತಿಗಳ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ರಾಜಸ್ವ / ವರಮಾನದ ಶೀರ್ಷಿಕೆ | 2011-12 | | 2012-13 | | 2013-14 | | 2014-15 | | 2015-16 | | 2014–15ಕ್ಕೆ ಹೋಲಿಸಿದಲ್ಲಿ 2015–16ರಲ್ಲಿನ ಶೇಕಡಾವಾರು ಹೆಚ್ಚಳ (+)/ ಇಳಿಕೆ (–) | |
|---|---|---|---|---|---|---|---|---|---|---|---|---|---|
| | | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯ ವ್ಯಯ ಅಂದಾಜು | ವಾಸ್ತವಿಕ |
| 1. | ಮಾರಾಟಗಳು, ವಾಣಿಜ್ಯ ಮುಂತಾದವುಗಳ ಮೇಲಿನ ತೆರಿಗೆಗಳು | 24,170.00 | 25,020.02 | 27,735.00 | 28,414.44 | 33,590.00 | 33,719.35 | 37,250.00 | 38,286.03 | 41,329.00 | 40,448.63 | 10.95 | 5.65 |
| 2. | ರಾಜ್ಯ ಅಬಕಾರಿ | 9,115.00 | 9,775.43 | 10,775.00 | 11,069.73 | 12,600.00 | 12,828.36 | 14,430.00 | 13,801.08 | 15,200.00 | 15,332.88 | 5.34 | 11.10 |
| 3. | ಮುದ್ರಾಂಕ ಶುಲ್ಕಗಳು | 4,030.00 | 4,623.20 | 5,200.00 | 5,225.02 | 6,500.00 | 6,188.76 | 7,450.00 | 7,025.85 | 8,200.00 | 8,214.71 | 10.07 | 16.92 |
| 4. | ಮೋಟಾರು ವಾಹನಗಳ ಮೇಲಿನ ತೆರಿಗೆಗಳು | 2,630.00 | 2,956.72 | 3,350.00 | 3,829.52 | 4,120.00 | 3,911.50 | 4,350.00 | 4,541.57 | 4,800.00 | 5,001.69 | 10.34 | 10.13 |
| 5. | ಇತರವುಗಳು | 3,872.09 | 4,100.59 | 4,760.69 | 5,214.84 | 5,653.99 | 5,955.56 | 6,389.75 | 6,525.68 | 6,916.39 | 6,552.27 | 8.24 | 0.41 |
| **ಒಟ್ಟು** | | **43,817.09** | **46,475.96** | **51,820.69** | **53,753.55** | **62,463.99** | **62,603.53** | **69,869.75** | **70,180.21** | **76,445.69** | **75,550.18** | **9.41** | **7.65** |

**1.1.3** 2011–12ರಿಂದ 2015–16ರ ಅವಧಿಯಲ್ಲಿ ಸಂಗ್ರಹಿಸಲಾದಂತಹ ತೆರಿಗೆಯೇತರ ರಾಜಸ್ವ/ವರಮಾನದ ವಿವರಗಳನ್ನು **ಕೋಷ್ಟಕ 1.1.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.1.3**
**ಸಂಗ್ರಹಿಸಲಾದಂತಹ ತೆರಿಗೆಯೇತರ ಸ್ವೀಕೃತಿಗಳ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ರಾಜಸ್ವ/ ವರಮಾನದ ಶೀರ್ಷಿಕೆ | 2011-12 | | 2012-13 | | 2013-14 | | 2014-15 | | 2015-16 | | 2014–15ಕ್ಕೆ ಹೋಲಿಸಿದಲ್ಲಿ 2015–16ರಲ್ಲಿನ ಶೇಕಡಾವಾರು ಹೆಚ್ಚಳ (+) / ಇಳಿಕೆ (–) | |
|---|---|---|---|---|---|---|---|---|---|---|---|---|---|
| | | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯ ವ್ಯಯ ಅಂದಾಜು | ವಾಸ್ತವಿಕ |
| 1 | ಕಬ್ಬಿಣೇತರ ಲೋಹಗಳ ಗಣಿಗಾರಿಕೆ ಮತ್ತು ಲೋಹ ಉದ್ಯಮಗಳು | 1,500.00 | 1,326.84 | 1,500.00 | 1,496.49 | 1,750.00 | 1,474.49 | 1,750.00 | 1,931.10 | 2,048.15 | 2,003.80 | 17.04 | 3.76 |
| 2. | ಇತರೆ ತೆರಿಗೆಯೇತರ ಸ್ವೀಕೃತಿಗಳು | 2,174.79 | 2,760.02 | 1,692.82 | 2,469.62 | 2,288.28 | 2,557.41 | 2,723.43 | 2,757.14 | 3,158.02 | 3,351.24 | 15.96 | 21.55 |
| | **ಒಟ್ಟು** | **3,674.79** | **4,086.86** | **3,192.82** | **3,966.11** | **4,038.28** | **4,031.90** | **4,473.43** | **4,688.24** | **5,206.17** | **5,355.04** | **16.38** | **14.22** |

## 1.2 ರಾಜಸ್ವ/ವರಮಾನ ಬಾಕಿಗಳ ವಿಶ್ಲೇಷಣೆ

ರಾಜಸ್ವ/ವರಮಾನದ ಕೆಲವು ಪ್ರಧಾನ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ 31 ಮಾರ್ಚ್ 2016ರಲ್ಲಿದ್ದಂತೆ ರಾಜಸ್ವ/ವರಮಾನ ಬಾಕಿಗಳು **ಕೋಷ್ಟಕ– 1.2**ರಲ್ಲಿ ವಿವರಿಸಿರುವಂತೆ ₹ 12,458.06 ಕೋಟಿಯಷ್ಟಿದ್ದವು.

**ಕೋಷ್ಟಕ-1.2**
**ರಾಜಸ್ವ/ವರಮಾನದ ಬಾಕಿಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ರಾಜಸ್ವ/ವರಮಾನದ ಶೀರ್ಷಿಕೆ | 31 ಮಾರ್ಚ್ 2016ರಲ್ಲಿದ್ದಂತೆ ಬಾಕಿ ಇದ್ದಂತಹ ಒಟ್ಟಾರೆ ಮೊತ್ತ | ಇಲಾಖೆಯ ಉತ್ತರಗಳು |
|---|---|---|---|
| 1. | 0030 (ಮುದ್ರಾಂಕ ಶುಲ್ಕ) | 82.91 | ಮಾಹಿತಿಯನ್ನು ಒದಗಿಸಿರುವುದಿಲ್ಲ |
| 2. | 0039 (ರಾಜ್ಯ ಅಬಕಾರಿ) | 827.81 | ಒಟ್ಟಾರೆ ಬಾಕಿಗಳ ಪೈಕಿ, ₹ 78.18 ಕೋಟಿ ಮೊತ್ತವು ನ್ಯಾಯಾಲಯಗಳ ತಡೆಯಲ್ಲಿರುತ್ತದೆ, ₹ 387.66 ಕೋಟಿ ಮೊತ್ತವು ಕಂದಾಯ ವಸೂಲಾತಿ ಪ್ರಮಾಣಪತ್ರಗಳಿಂದ ವ್ಯಾಪಿಸಿರುತ್ತದೆ ಹಾಗೂ ಉಳಿದ ₹ 361.97 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ ವಸೂಲಾತಿಯು ಪ್ರಗತಿಯಲ್ಲಿದೆ. |
| 3. | 0040 (ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆಗಳು) | 10,791.81 | ಒಟ್ಟಾರೆ ಬಾಕಿಗಳ ಪೈಕಿ, ₹ 1,151.68 ಕೋಟಿ ಮೊತ್ತಕ್ಕೆ ನ್ಯಾಯಾಲಯಗಳಿಂದ ತಡೆಯಿದೆ, ₹ 140.20 ಕೋಟಿ ಮೊತ್ತವು ಬಿಐಎಫ್ಆರ್[2] ಮುಂದಿದೆ, ₹ 199.89 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ ಸಂಸ್ಥೆಗಳು ಸಮಾಪನ ಪ್ರಕ್ರಿಯೆಯ ಅಡಿಯಲ್ಲಿವೆ, ₹ 90.42 ಕೋಟಿ ಮೊತ್ತವು ಕಂದಾಯ ವಸೂಲಾತಿ ಪ್ರಮಾಣ ಪತ್ರಗಳಿಂದ ವ್ಯಾಪಿಸಿವೆ, ₹ 9,016.18 ಕೋಟಿ ಮೊತ್ತವು ನ್ಯಾಯಾಲಯಗಳ ಹಾಗೂ ಇಲಾಖಾ ವಸೂಲಾತಿಯ ವ್ಯಾಪ್ತಿಯಲ್ಲಿವೆ ಹಾಗೂ ₹ 58.74 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ ವಸೂಲಾತಿಯು ಸಾಧ್ಯವಿಲ್ಲದೆಯೇ ದಾಖಲೆಗಳಿಂದ ತೆಗೆದುಹಾಕುವ (ರೈಟ್ ಆಫ್) ಪ್ರಸ್ತಾವನೆಗಳನ್ನು ಮಾಡಲಾಗಿದೆ ಹಾಗೂ ಸ್ವೀಕರಿಸಲಾಗಿರುವಂತಹ ₹ 134.70 ಕೋಟಿ ಮೊತ್ತವು ಪರಿಶೀಲನೆಯ ಅಡಿಯಲ್ಲಿದೆ. |
| 4 | 0853 (ಕಬ್ಬಿಣೇತರ ಲೋಹಗಳ ಗಣಿಗಾರಿಕೆ ಮತ್ತು ಲೋಹ ಉದ್ಯಮಗಳು) | 755.53 | ಮಾಹಿತಿಯನ್ನು ಒದಗಿಸಿರುವುದಿಲ್ಲ. |
| | **ಒಟ್ಟು** | **12,458.06** | |

ಇಂಧನ, ಸಾರಿಗೆ ಮತ್ತು ಕಂದಾಯ ಇಲಾಖೆಗಳಿಂದ ರಾಜಸ್ವ/ವರಮಾನದ ಬಾಕಿಗಳು, ಯಾವುದಾದರೂ ಇದ್ದಲ್ಲಿ, ಅವುಗಳ ವಿವರಗಳನ್ನು ಕೋರಲಾಗಿದೆಯಾದರೂ (ಮೇ 2016), ಅವುಗಳನ್ನು ಸ್ವೀಕರಿಸಲಾಗಿರುವುದಿಲ್ಲ (ಡಿಸೆಂಬರ್ 2016).

## 1.3 ಇಲಾಖೆಯು ಪತ್ತೆ ಹಚ್ಚಿರುವ ತೆರಿಗೆ ವಂಚನೆಯ ಪ್ರಕರಣಗಳು

ಸಾರಿಗೆ, ರಾಜ್ಯ ಅಬಕಾರಿ ಮತ್ತು ವಾಣಿಜ್ಯ ತೆರಿಗೆಗಳ ಇಲಾಖೆಗಳು ಪತ್ತೆ ಹಚ್ಚಿರುವಂತಹ ತೆರಿಗೆ ವಂಚನೆಯ ಪ್ರಕರಣಗಳ ವಿವರಗಳನ್ನು **ಕೋಷ್ಟಕ 1.3**ರಲ್ಲಿ ನೀಡಲಾಗಿದೆ.

**ಕೋಷ್ಟಕ-1.3**
**ತೆರಿಗೆ ಪಾವತಿಯಿಂದ ತಪ್ಪಿಸಿಕೊಂಡಿರುವಂತಹ ಪ್ರಕರಣಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ರಾಜಸ್ವ/ ವರಮಾನದ ಶೀರ್ಷಿಕೆ | 31 ಮಾರ್ಚ್ 2015 ರಲ್ಲಿದ್ದಂತೆ ಇದ್ದಂತಹ ಪ್ರಕರಣಗಳು | 2015–16ರಲ್ಲಿ ಪತ್ತೆ ಹಚ್ಚಿರುವ ಪ್ರಕರಣಗಳು | ಒಟ್ಟು | ಕರನಿರ್ಧಾರಣೆ/ವಿಚಾರಣೆ/ ತನಿಖೆಗಳನ್ನು ಪೂರ್ಣಗೊಳಿಸಲಾಗಿರುವಂತಹ ಹಾಗೂ ದಂಡ ಇತ್ಯಾದಿಗಳ ಜೊತೆಯಲ್ಲಿ ಹೆಚ್ಚುವರಿ ತಗಾದೆಯನ್ನು ಸೃಷ್ಟಿಸಲಾದಂತಹ ಪ್ರಕರಣಗಳ ಸಂಖ್ಯೆ | | 31 ಮಾರ್ಚ್ 2016ರಲ್ಲಿದ್ದಂತೆ ಅಂತಿಮ ಗೊಳಿಸಲು ಬಾಕಿಯಿದ್ದಂತಹ ಪ್ರಕರಣಗಳ ಸಂಖ್ಯೆ |
|---|---|---|---|---|---|---|---|
| | | | | | ಪ್ರಕರಣಗಳ ಸಂಖ್ಯೆ | ತಗಾದೆಯ ಮೊತ್ತ | |
| 1. | 0039 (ರಾಜ್ಯ ಅಬಕಾರಿ) | 02 | 0 | 02 | 0 | 0 | 02 |
| 2. | 0041 (ಮೋಟಾರು ವಾಹನಗಳ ಮೇಲಿನ ತೆರಿಗೆ) | 06 | 0 | 06 | 4 | 0.68 | 02 |

[2] ಕೈಗಾರಿಕಾ ಮತ್ತು ಹಣಕಾಸು ಪುನರ್–ನಿರ್ಮಾಣಕ್ಕಾಗಿನ ಮಂಡಳಿ (ಬಿಐಎಫ್ಆರ್).

(₹ ಕೋಟಿಯಲ್ಲಿ)

| ಕ್ರಮ ಸಂಖ್ಯೆ | ರಾಜಸ್ವ/ ವರಮಾನದ ಶೀರ್ಷಿಕೆ | 31 ಮಾರ್ಚ್ 2015 ರಲ್ಲಿದ್ದಂತೆ ಇದ್ದಂತಹ ಪ್ರಕರಣಗಳು | 2015–16ರಲ್ಲಿ ಪತ್ತೆ ಹಚ್ಚಿರುವ ಪ್ರಕರಣಗಳು | ಒಟ್ಟು | ಕರನಿರ್ಧಾರಣೆ/ವಿಚಾರಣೆ/ ತನಿಖೆಗಳನ್ನು ಪೂರ್ಣಗೊಳಿಸಲಾಗಿರುವಂತಹ ಹಾಗೂ ದಂಡ ಇತ್ಯಾದಿಗಳ ಜೊತೆಯಲ್ಲಿ ಹೆಚ್ಚುವರಿ ತಗಾದೆಯನ್ನು ಸೃಷ್ಟಿಸಲಾದಂತಹ ಪ್ರಕರಣಗಳ ಸಂಖ್ಯೆ | | 31 ಮಾರ್ಚ್ 2016ರಲ್ಲಿದ್ದಂತೆ ಅಂತಿಮ ಗೊಳಿಸಲು ಬಾಕಿಯಿದ್ದಂತಹ ಪ್ರಕರಣಗಳ ಸಂಖ್ಯೆ |
|---|---|---|---|---|---|---|---|
| | | | | | ಪ್ರಕರಣಗಳ ಸಂಖ್ಯೆ | ತಗಾದೆಯ ಮೊತ್ತ | |
| 3. | 0040 (ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆ) | 5,283 | 25,357 | 30,640 | 24,827 | 122.64 | 5,813 |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ವಾಣಿಜ್ಯ ತೆರಿಗಗಳ ಇಲಾಖೆಯಲ್ಲಿ ಪತ್ತೆ ಹಚ್ಚಲಾದಂತಹ ಪ್ರಕರಣಗಳ ಬಹುಪಾಲನ್ನು ಇತ್ಯರ್ಥಗೊಳಿಸಲಾಗಿದೆಯಾದರೂ, ವರ್ಷದ ಕೊನೆಯಲ್ಲಿ ಗಮನಾರ್ಹ ಸಂಖ್ಯೆಯ ಪ್ರಕರಣಗಳು ಇನ್ನೂ ಬಾಕಿಯಿದ್ದವು. ರಾಜಸ್ವ/ವರಮಾನದ ಹಿತದೃಷ್ಟಿಯಿಂದ ಈ ಪ್ರಕರಣಗಳನ್ನು ಇತ್ಯರ್ಥಗೊಳಿಸುವುದಕ್ಕಾಗಿ ವಾಣಿಜ್ಯ ತೆರಿಗೆಗಳ ಇಲಾಖೆಯು ತ್ವರಿತ ಕ್ರಮವನ್ನು ತೆಗೆದುಕೊಳ್ಳಬೇಕು.

ವಂಚನೆಗಳು ಹಾಗೂ ತೆರಿಗೆ ಪಾವತಿಯಿಂದ ತಪ್ಪಿಸಿಕೊಂಡಿರುವಂತಹ ಪ್ರಕರಣಗಳು ಯಾವುದಾದರೂ ಇದ್ದಲ್ಲಿ, ಅವುಗಳ ವಿವರಗಳನ್ನು ಒದಗಿಸುವಂತೆ ಕೋರಲಾಯಿತಾದರೂ (ಮೇ 2016) ಆ ವಿವರಗಳನ್ನು ಇಂಧನ ಮತ್ತು ಕಂದಾಯ ಇಲಾಖೆಗಳಿಂದ ಇನ್ನೂ ಸ್ವೀಕರಿಸಲಾಗಿರುವುದಿಲ್ಲ (ಡಿಸೆಂಬರ್ 2016). ಅಂತಹ ಯಾವುದೇ ಪ್ರಕರಣಗಳನ್ನೂ ಪತ್ತೆ ಹಚ್ಚಲಾಗಿರುವುದಿಲ್ಲ ಎಂಬುದಾಗಿ ಗಣಿಗಳು ಮತ್ತು ಭೂ ವಿಜ್ಞಾನ ಇಲಾಖೆ ಮತ್ತು ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಗಳು ವರದಿ ಮಾಡಿವೆ.

## 1.4 ಬಾಕಿಯಿರುವ ಮರುಪಾವತಿ ಪ್ರಕರಣಗಳು

ವಾಣಿಜ್ಯ ತೆರಿಗೆಗಳ ಇಲಾಖೆಯು ಸಲ್ಲಿಸಿರುವ ವರದಿಯಂತೆ, ವರ್ಷದ ಪ್ರಾರಂಭದಲ್ಲಿ ಬಾಕಿಯಿದ್ದಂತಹ ಮರುಪಾವತಿ ಪ್ರಕರಣಗಳ ಸಂಖ್ಯೆ, ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಲಾದಂತಹ ಮರುಪಾವತಿ ಕೋರಿಕೆಗಳು, ಪ್ರಸಕ್ತ ಸಾಲಿನಲ್ಲಿ ಮಾಡಲಾದ ಮರುಪಾವತಿಗಳು ಹಾಗೂ 2015–16 ಸಾಲಿನ ಅಂತ್ಯದಲ್ಲಿ ಬಾಕಿ ಉಳಿದಿದ್ದಂತಹ ಪ್ರಕರಣಗಳ ವಿವರಗಳನ್ನು **ಕೋಷ್ಟಕ 1.4**ರಲ್ಲಿ ನೀಡಲಾಗಿದೆ.

**ಕೋಷ್ಟಕ-1.4**
**ಬಾಕಿಯಿರುವ ಮರುಪಾವತಿ ಪ್ರಕರಣಗಳ ವಿವರಗಳು**

(₹ ಕೋಟಿಯಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 2015-16 | |
|---|---|---|---|
| | | ಪ್ರಕರಣಗಳ ಸಂಖ್ಯೆ | ಮೊತ್ತ |
| 1. | ವರ್ಷದ ಪ್ರಾರಂಭದಲ್ಲಿ ಬಾಕಿಯಿದ್ದಂತಹ ಮರುಪಾವತಿಗಾಗಿನ ಕೋರಿಕೆಗಳು | 264 | 135.03 |
| 2. | ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಲಾದಂತಹ ಕೋರಿಕೆಗಳು | 4,603 | 1,007.53 |
| 3. | ಪ್ರಸಕ್ತ ಸಾಲಿನಲ್ಲಿ ಮಾಡಲಾದ ಮರುಪಾವತಿಗಳು | 3,549 | 860.13 |
| 4. | ವರ್ಷದ ಅಂತ್ಯದಲ್ಲಿ ಬಾಕಿ ಉಳಿದಿದ್ದವುಗಳು | 1,318 | 282.43 |

ಮರುಪಾವತಿಗೆ ಸಂಬಂಧಿಸಿದಂತೆ ಬಾಕಿಯಿರುವಂತಹ ಪ್ರಕರಣಗಳು ಯಾವುದಾದರೂ ಇದ್ದಲ್ಲಿ, ಅವುಗಳ ವಿವರಗಳನ್ನು ಒದಗಿಸುವಂತೆ ಇಂಧನ, ಸಾರಿಗೆ ಹಾಗೂ ಗಣಿಗಳು ಮತ್ತು ಭೂ ವಿಜ್ಞಾನ ಇಲಾಖೆಗಳನ್ನು ಕೋರಲಾಯಿತಾದರೂ (ಮೇ 2016), ಆ ವಿವರಗಳು ಸ್ವೀಕೃತಗೊಂಡಿರುವುದಿಲ್ಲ (ಡಿಸೆಂಬರ್ 2016). ಮರುಪಾವತಿಯ ಯಾವುದೇ ಪ್ರಕರಣಗಳು ಬಾಕಿಯಿರುವುದಿಲ್ಲ ಎಂಬುದಾಗಿ ರಾಜ್ಯ ಅಬಕಾರಿ ಹಾಗೂ ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಗಳು ವರದಿಯನ್ನು ಸಲ್ಲಿಸಿರುತ್ತವೆ.

## 1.5 ಲೆಕ್ಕಪರಿಶೋಧನೆಯ ಕಡೆಗೆ ಸರ್ಕಾರ/ಇಲಾಖೆಗಳ ಪ್ರತಿಕ್ರಿಯೆ

ಮಹಾಲೇಖಾಪಾಲರು (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಇವರು ಹಣಕಾಸು ವ್ಯವಹಾರಗಳ ಪರೀಕ್ಷಾ ಪರಿಶೀಲನೆ ಮಾಡುವುದಕ್ಕಾಗಿ ನಿಗದಿತ ನಿಯಮಗಳು ಮತ್ತು ಕಾರ್ಯವಿಧಾನಗಳ ಪ್ರಕಾರ ಪ್ರಮುಖ ಲೆಕ್ಕಪತ್ರಗಳು ಹಾಗೂ ಇನ್ನಿತರೆ ದಾಖಲೆಗಳನ್ನು ಇಟ್ಟಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸರ್ಕಾರದ ಇಲಾಖೆಗಳನ್ನು ನಿಯತಕಾಲಿಕವಾಗಿ ಪರೀಕ್ಷಣೆ ಮಾಡುತ್ತಾರೆ. ಪರೀಕ್ಷಣೆಗಳ ಸಮಯದಲ್ಲಿ ಪತ್ತೆ ಹಚ್ಚಲಾದಂತಹ ಆದರೆ, ಸ್ಥಳದಲ್ಲಿಯೇ ಇತ್ಯರ್ಥಗೊಳಿಸಲು ಸಾಧ್ಯವಾಗದಂತಹ ನಿಯಮಬಾಹಿರತೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಪರೀಕ್ಷಣಾ ವರದಿಗಳನ್ನು ಪರೀಕ್ಷಣೆ ಮಾಡಲಾದಂತಹ ಕಚೇರಿಯ ಮುಖ್ಯಸ್ಥರಿಗೆ ನೀಡುವ ಮೂಲಕ

ಈ ಪರೀಕ್ಷಣೆಗಳನ್ನು ಅನುಸರಿಸಲಾಗುತ್ತದೆ. ಕಚೇರಿಗಳ ಮುಖ್ಯಸ್ಥರುಗಳು/ಸರ್ಕಾರ, ಪರೀಕ್ಷಣಾ ವರದಿಗಳಲ್ಲಿ ಒಳಗೊಂಡಿರುವಂತಹ ಅಂಶಗಳಿಗೆ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳುವ, ತಪ್ಪುಗಳು ಹಾಗೂ ಲೋಪದೋಷಗಳನ್ನು ಸರಿಪಡಿಸುವ ಹಾಗೂ ಪರೀಕ್ಷಣಾ ವರದಿಗಳನ್ನು ನೀಡಿದ ದಿನಾಂಕದಿಂದ ಒಂದು ತಿಂಗಳಿನ ಒಳಗೆ ಮಹಾಲೇಖಾಪಾಲರಿಗೆ ಪ್ರಾರಂಭಿಕ/ಮೂಲ ಉತ್ತರವನ್ನು ನೀಡುವ ಮೂಲಕ ಅನುಪಾಲನಾ ಕ್ರಮಗಳ ಬಗ್ಗೆ ವರದಿಯನ್ನು ಸಲ್ಲಿಸುವ ಅಗತ್ಯತೆಯಿರುತ್ತದೆ. ಗುರುತರವಾದಂತಹ ಹಣಕಾಸಿನ ನಿಯಮಬಾಹಿರತೆಗಳ ಬಗ್ಗೆ ಇಲಾಖೆಗಳ ಮುಖ್ಯಸ್ಥರುಗಳಿಗೆ ಹಾಗೂ ಸರ್ಕಾರಕ್ಕೆ ವರದಿಗಳನ್ನು ಸಲ್ಲಿಸಲಾಗುವುದು.

ಜೂನ್ 2016ಕ್ಕೆ ಅಂತ್ಯಗೊಂಡ ಅವಧಿಗೆ ₹ 2,162.61 ಕೋಟಿ ಮೊತ್ತವು ಒಳಗೊಂಡಂತೆ 4,443 ಪರೀಕ್ಷಣಾ ವರದಿಗಳು (ಡಿಸೆಂಬರ್ 2015ರವರೆಗೆ ನೀಡಲಾಗಿದ್ದವುಗಳು) ಬಾಕಿ ಉಳಿದಿದ್ದವು. ಅವುಗಳಿಗೆ ಅನುಗುಣವಾದ ಹಿಂದಿನ ಎರಡು ವರ್ಷಗಳ ಅಂಕಿಸಂಖ್ಯೆಗಳ ಜೊತೆಯಲ್ಲಿ ವಿವರಗಳನ್ನು **ಕೋಷ್ಟಕ 1.5**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5**
**ಬಾಕಿ ಇರುವಂತಹ ಪರೀಕ್ಷಣಾ ವರದಿಗಳ ವಿವರಗಳು**

| | ಜೂನ್ 2014 | ಜೂನ್ 2015 | ಜೂನ್ 2016 |
|---|---|---|---|
| ಇತ್ಯರ್ಥಗೊಳ್ಳಲು ಬಾಕಿ ಇರುವಂತಹ ಪರೀಕ್ಷಣಾ ವರದಿಗಳ ಸಂಖ್ಯೆ | 4,114 | 4,022 | 4,443 |
| ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು ಬಾಕಿ ಉಳಿದಿರುವಂತಹ ಅಂಶಗಳ ಸಂಖ್ಯೆ | 8,753 | 9,573 | 9,305 |
| ಒಳಗೊಂಡಿರುವಂತಹ ರಾಜಸ್ವ/ವರಮಾನದ ಮೊತ್ತ (₹ ಕೋಟಿಯಲ್ಲಿ) | 1,851.83 | 2,061.05 | 2,162.61 |

**1.5.1** 30 ಜೂನ್ 2016ರಲ್ಲಿದ್ದಂತೆ ಬಾಕಿ ಉಳಿದಿರುವಂತಹ ಪರೀಕ್ಷಣಾ ವರದಿಗಳು ಹಾಗೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು ಬಾಕಿ ಉಳಿದಿರುವಂತಹ ಅಂಶಗಳ ಇಲಾಖಾವಾರು ವಿವರಗಳನ್ನು **ಕೋಷ್ಟಕ 1.5.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5.1**
**ಪರೀಕ್ಷಣಾ ವರದಿಗಳ ಇಲಾಖಾವಾರು ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಇಲಾಖೆಯ ಹೆಸರು | ಸ್ವೀಕೃತಿಯ ಸ್ವರೂಪ | ಬಾಕಿ ಉಳಿದಿರುವಂತಹ ಪರೀಕ್ಷಣಾ ವರದಿಗಳ ಸಂಖ್ಯೆ | ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು ಬಾಕಿ ಉಳಿದಿರುವಂತಹ ಅಂಶಗಳ ಸಂಖ್ಯೆ | ಒಳಗೊಂಡಿರುವ ಹಣದ ಮೌಲ್ಯ |
|---|---|---|---|---|---|
| 1. | ಹಣಕಾಸು | ವಾಣಿಜ್ಯ ತೆರಿಗೆಗಳು | 2,174 | 5,120 | 411.37 |
| 2. | | ರಾಜ್ಯ ಅಬಕಾರಿ | 564 | 860 | 382.00 |
| 3. | ಕಂದಾಯ | ಭೂ ಕಂದಾಯ | 399 | 889 | 280.39 |
| 4. | | ಮುದ್ರಾಂಕಗಳ ಸುಂಕ ಮತ್ತು ನೋಂದಣಿ ಶುಲ್ಕಗಳು | 748 | 1,363 | 356.21 |
| 5. | ಸಾರಿಗೆ | ಮೋಟಾರು ವಾಹನಗಳ ಮೇಲಿನ ತೆರಿಗೆ | 385 | 608 | 47.82 |
| 6. | ವಾಣಿಜ್ಯ ಮತ್ತು ಕೈಗಾರಿಕೆಗಳು | ಖನಿಜಗಳ ಸ್ವೀಕೃತಿಗಳು | 164 | 447 | 679.80 |
| 7. | ಇಂಧನ | ವಿದ್ಯುಚ್ಛಕ್ತಿಯ ಮೇಲಿನ ತೆರಿಗೆ | 9 | 18 | 5.02 |
| | | **ಒಟ್ಟು** | **4,443** | **9,305** | **2,162.61** |

2015–16ರಲ್ಲಿ ನೀಡಲಾಗಿದ್ದಂತಹ 460 ಪರೀಕ್ಷಣಾ ವರದಿಗಳ ಪೈಕಿ 346ಕ್ಕೆ, ಪರೀಕ್ಷಣಾ ವರದಿಗಳನ್ನು ನೀಡಿದ ದಿನಾಂಕದಿಂದ ಒಂದು ತಿಂಗಳ ಒಳಗೆ ಸ್ವೀಕರಿಸಲು ಅಗತ್ಯವಿದ್ದಂತಹ ಮೊದಲ ಉತ್ತರವನ್ನೂ ಸಹ ಲೆಕ್ಕಪರಿಶೋಧನೆಯು ಸ್ವೀಕರಿಸಿರುವುದಿಲ್ಲ. ಉತ್ತರಗಳನ್ನು ಸ್ವೀಕರಿಸದ ಕಾರಣ ಇರುವಂತಹ ಪರೀಕ್ಷಣಾ ವರದಿಗಳ ಬಹಳಷ್ಟು ಸಂಖ್ಯೆಯ ಬಾಕಿಗಳು, ಮಹಾಲೇಖಾಪಾಲರು ಸ್ಪಷ್ಟಪಡಿಸಿರುವಂತಹ ತಪ್ಪುಗಳು, ಲೋಪದೋಷಗಳು ಹಾಗೂ ನಿಯಮಬಾಹಿರತೆಗಳನ್ನು ಸರಿಪಡಿಸುವಲ್ಲಿ ಕಚೇರಿಗಳ ಹಾಗೂ ಇಲಾಖೆಗಳ ಮುಖ್ಯಸ್ಥರುಗಳು ಯಾವುದೇ ಕ್ರಮಗಳನ್ನೂ ತೆಗೆದುಕೊಂಡಿರಲಿಲ್ಲ ಎಂಬ ವಾಸ್ತವಾಂಶವನ್ನು ಸೂಚಿಸುತ್ತವೆ.

ಸರ್ಕಾರದ ಬೊಕ್ಕಸಕ್ಕೆ ಬಾಕಿ ಇರುವಂತಹ ರಾಜಸ್ವ/ವರಮಾನದ ಸಮಯೋಚಿತವಾದಂತಹ ವಸೂಲಾತಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳಿಗೆ ತ್ವರಿತ ಮತ್ತು ಸೂಕ್ತ ಪ್ರತಿಕ್ರಿಯೆಯನ್ನು ನೀಡುವುದಕ್ಕಾಗಿ ಒಂದು ಪರಿಣಾಮಕಾರಿತ್ವದಿಂದ ಕೂಡಿದ ವ್ಯವಸ್ಥೆಯನ್ನು ಹೊಂದುವುದನ್ನು ಸರ್ಕಾರವು ಪರಿಗಣಿಸಬೇಕು.

## 1.5.2 ಇಲಾಖಾ ಲೆಕ್ಕಪರಿಶೋಧನಾ ಸಮಿತಿಯ ಸಭೆಗಳು

ಪರೀಕ್ಷಣಾ ವರದಿಗಳಲ್ಲಿ ಒಳಗೊಂಡಿರುವಂತಹ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸುವ ಸಲುವಾಗಿ ಎಲ್ಲಾ ಇಲಾಖೆಗಳ ಸಚಿವಾಲಯದಲ್ಲಿ ಇಲಾಖಾ ಲೆಕ್ಕಪರಿಶೋಧನಾ ಸಮಿತಿಯನ್ನು ರಚಿಸುವುದಕ್ಕೆ ಸರ್ಕಾರವು ನಿರ್ದೇಶನಗಳನ್ನು ನೀಡಿದ್ದಿತು (ಮಾರ್ಚ್ 1968). ಈ ಸಮಿತಿಗಳು ಸಂಬಂಧಿತ ಆಡಳಿತಾತ್ಮಕ ಇಲಾಖೆಗಳ ಕಾರ್ಯದರ್ಶಿಯವರ ನೇತೃತ್ವದಲ್ಲಿದ್ದು ಹಾಗೂ ರಾಜ್ಯ ಸರ್ಕಾರದ ಪದನಿಮಿತ್ತ ಅಧಿಕಾರಿಗಳು ಹಾಗೂ ಮಹಾಲೇಖಪಾಲರಿಂದ ನಾಮನಿರ್ದೇಶನವನ್ನು ಹೊಂದಿದ ಓರ್ವ ಅಧಿಕಾರಿಯವರು ಸಭೆಗೆ ಹಾಜರಾಗಬೇಕು. ಈ ಸಮಿತಿಗಳು ನಿಯತಕಾಲಿಕವಾಗಿ, ಯಾವುದೇ ಸಂದರ್ಭದಲ್ಲಿಯೂ, ಪ್ರತೀ ತ್ರೈಮಾಸಿಕದಲ್ಲಿ ಒಂದು ಸಲವಾದರೂ ಸಭೆ ಸೇರಬೇಕಿತ್ತು.

2015–16 ಸಾಲಿನಲ್ಲಿ ನಡೆಸಲಾದಂತಹ ಇಲಾಖಾವಾರು ಇಲಾಖಾ ಲೆಕ್ಕಪರಿಶೋಧನಾ ಸಮಿತಿಯ ಸಭೆಗಳ ಸಂಖ್ಯೆ ಹಾಗೂ ಇತ್ಯರ್ಥಗೊಳಿಸಲಾದಂತಹ ಕಂಡಿಕೆಗಳ ಸಂಖ್ಯೆಯನ್ನು **ಕೋಷ್ಟಕ 1.5.2**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5.2**

**ಇಲಾಖಾವಾರು ಇಲಾಖಾ ಲೆಕ್ಕಪರಿಶೋಧನಾ ಸಮಿತಿ ಸಭೆಗಳ ವಿವರಗಳು**

| ಇಲಾಖೆ | ನಡೆಸಲಾದಂತಹ ಸಭೆಗಳ ಸಂಖ್ಯೆ | ಇತ್ಯರ್ಥಗೊಳಿಸಲಾದಂತಹ ಕಂಡಿಕೆಗಳ ಸಂಖ್ಯೆ | ಹಣಕಾಸಿನ ಮೌಲ್ಯ (₹ ಲಕ್ಷದಲ್ಲಿ) |
|---|---|---|---|
| ವಾಣಿಜ್ಯ ತೆರಿಗೆಗಳು | 04 | 205 | 784.01 |
| ಮುದ್ರಾಂಕಗಳು ಮತ್ತು ನೋಂದಣಿ | 01 | 210 | 1,189.82 |
| ಭೂ ಕಂದಾಯ | 04 | 128 | 1,536.61 |
| ರಾಜ್ಯ ಅಬಕಾರಿ | 01 | 56 | 294.29 |

ಎರಡು ಇಲಾಖೆಗಳು ಅವೆಂದರೆ ಸಾರಿಗೆ ಮತ್ತು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಗಳು, ಇಲಾಖಾ ಲೆಕ್ಕಪರಿಶೋಧನಾ ಸಮಿತಿಯ ಸಭೆಗಳನ್ನು ನಡೆಸಿರಲಿಲ್ಲ.

## 1.5.3 ಪರಿಶೀಲನೆಗಾಗಿ ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಒದಗಿಸದಿದ್ದುದು

ತೆರಿಗೆ ರಾಜಸ್ವ/ವರಮಾನ/ತೆರಿಗೆಯೇತರ ರಾಜಸ್ವ/ವರಮಾನದ ಸ್ಥಳೀಯ ಲೆಕ್ಕಪರಿಶೋಧನೆಯ ಕಾರ್ಯಕ್ರಮವನ್ನು ಸಾಕಷ್ಟು ಮುಂಚಿತವಾಗಿ ತಯಾರಿಸಲಾಗುವುದು ಹಾಗೂ ಲೆಕ್ಕಪರಿಶೋಧನೆಯ ಪರಿಶೀಲನೆಗಾಗಿ ಸಂಬಂಧಿಸಿದ ದಾಖಲೆಗಳನ್ನು ಸಿದ್ಧವಾಗಿಡುವುದಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ, ಈ ಬಗ್ಗೆ ತಿಳಿವಳಿಕೆ ಪತ್ರಗಳನ್ನು ಸಂಬಂಧಪಟ್ಟ ಕಚೇರಿ/ಇಲಾಖೆಗಳಿಗೆ ಲೆಕ್ಕಪರಿಶೋಧನೆಯು ಪ್ರಾರಂಭಗೊಳ್ಳುವ ದಿನಾಂಕಕ್ಕೆ ಸಾಮಾನ್ಯವಾಗಿ ಒಂದು ತಿಂಗಳು ಮುಂಚಿತವಾಗಿ ನೀಡಲಾಗುವುದು.

2015–16 ಸಾಲಿನಲ್ಲಿ 679ರಷ್ಟು ಸಂಖ್ಯೆಯ ಕರನಿರ್ಧಾರಣಾ ಕಡತಗಳು, ಸಲ್ಲಿಕೆಗಳು, ಮರುಪಾವತಿಗಳು, ವಹಿಗಳು ಹಾಗೂ ಇನ್ನಿತರೆ ಸಂಬಂಧಿತ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ. ಈ ಪ್ರಕರಣಗಳ ಇಲಾಖಾವಾರು ವಿವರಗಳನ್ನು **ಕೋಷ್ಟಕ 1.5.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5.3**

**ಒದಗಿಸದಿದ್ದಂತಹ ದಾಖಲೆಗಳ ವಿವರಗಳು**

| ಕಚೇರಿ/ಇಲಾಖೆಯ ಹೆಸರು | ಲೆಕ್ಕಪರಿಶೋಧನೆಗೆ ಒದಗಿಸದಿದ್ದಂತಹ ದಾಖಲೆಗಳ ಸಂಖ್ಯೆ |
|---|---|
| ವಾಣಿಜ್ಯ ತೆರಿಗೆಗಳ ಇಲಾಖೆ | 504 |
| ರಾಜ್ಯ ಅಬಕಾರಿ ಇಲಾಖೆ | 01 |
| ಭೂ ಕಂದಾಯ ಇಲಾಖೆ | 151 |
| ಸಾರಿಗೆ ಇಲಾಖೆ | 14 |
| ಗಣಿಗಳು ಮತ್ತು ಭೂವಿಜ್ಞಾನ ಇಲಾಖೆ | 06 |
| ಮುದ್ರಾಂಕಗಳು ಮತು ನೋಂದಣಿ ಇಲಾಖೆ | 03 |
| **ಒಟ್ಟು** | **679** |

## 1.5.4 ಕರಡು ಲೆಕ್ಕಪರಿಶೋಧನಾ ಕಂಡಿಕೆಗಳಿಗೆ ಇಲಾಖೆಗಳ ಪ್ರತಿಕ್ರಿಯೆ

ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲು ಪ್ರಸ್ತಾಪಿಸಲಾಗಿರುವ ಕರಡು ಕಂಡಿಕೆಗಳು/ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳನ್ನು ಮಹಾಲೇಖಪಾಲರು ಸಂಬಂಧಿತ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಅರೆ–ಸರ್ಕಾರಿ ಪತ್ರಗಳ ಜೊತೆಯಲ್ಲಿ ಕಳುಹಿಸಿಕೊಡುವರು. ಸರ್ಕಾರವು ನೀಡಿರುವ (ಏಪ್ರಿಲ್ 1952) ನಿರ್ದೇಶನಗಳಂತೆ ಕರಡು ಕಂಡಿಕೆಗಳು/ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳನ್ನು ಸ್ವೀಕರಿಸಿದ ದಿನಾಂಕದಿಂದ ಆರು ವಾರಗಳ

ಒಳಗೆ ಎಲ್ಲಾ ಇಲಾಖೆಗಳು ತಮ್ಮ ಉತ್ತರಗಳನ್ನು ನೀಡುವ ಅಗತ್ಯತೆಯಿರುತ್ತದೆ. ಸರ್ಕಾರದಿಂದ ಉತ್ತರಗಳನ್ನು ಬಾರದಿರುವ ವಾಸ್ತವಾಂಶವನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಅಂತಹ ಪ್ರತಿಯೊಂದು ಕಂಡಿಕೆಯ ಅಂತ್ಯದಲ್ಲಿಯೂ ತಪ್ಪದೇ ಸೂಚಿಸಲಾಗುತ್ತದೆ.

31 ಮಾರ್ಚ್ 2016ಕ್ಕೆ ಅಂತ್ಯಗೊಂಡಂತಹ ಸಾಲಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸುವ ಸಲುವಾಗಿ ಪ್ರಸ್ತಾಪಿಸಲಾಗಿದ್ದಂತಹ ಹದಿನೇಳು ಕರಡು ಕಂಡಿಕೆಗಳನ್ನು (ಎರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಹಾಗೂ ಒಂದು ಅನುಪಾಲನಾ ಲೆಕ್ಕಪರಿಶೋಧನೆಯೂ ಸೇರಿದಂತೆ) ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಕಳುಹಿಸಿಕೊಡಲಾಗಿದ್ದಿತು ಹಾಗೂ ಅವುಗಳ ಪ್ರತಿಗಳನ್ನು ಸಂಬಂಧಿತ ಇಲಾಖೆಗಳ ಮುಖ್ಯಸ್ಥರುಗಳಿಗೆ ಕಳುಹಿಸಿಕೊಡಲಾಗಿದ್ದಿತು.

ವಾಣಿಜ್ಯ ತೆರಿಗೆಗಳು, ಮುದ್ರಾಂಕಗಳು ಮತ್ತು ನೋಂದಣಿ ಹಾಗೂ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಗಳ ಮುಖ್ಯಸ್ಥರುಗಳಿಂದ ಒಂಭತ್ತು ಕರಡು ಕಂಡಿಕೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಯಿತು. ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳಿಗೆ ಸಂಬಂಧಿಸಿದಂತೆ, ನಿರ್ಗಮನ ಸಭೆಗಳನ್ನು ಸರ್ಕಾರದ ಜೊತೆ ನಡೆಸಲಾಗಿದ್ದಿತು (ಅಕ್ಟೋಬರ್ 2016) ಹಾಗೂ ಸಂಬಂಧಿತ ಇಲಾಖೆಗಳಿಂದ ಉತ್ತರಗಳನ್ನು ಸ್ವೀಕರಿಸಲಾಯಿತು. ಕಂದಾಯ, ಸಾರಿಗೆ ಹಾಗೂ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಗಳಿಗೆ ಸಂಬಂಧಿತ ಉಳಿದ ಆರು ಕರಡು ಕಂಡಿಕೆಗಳಿಗೆ ಸಂಬಂಧಿಸಿದಂತೆ ಉತ್ತರಗಳು ಸ್ವೀಕೃತಗೊಂಡಿರುವುದಿಲ್ಲ (ಡಿಸೆಂಬರ್ 2016).

### 1.5.5 ಲೆಕ್ಕಪರಿಶೋಧನಾ ವರದಿಗಳಿಗೆ ಅನುಸರಣಾ ಕ್ರಮಗಳು – ಸಂಕ್ಷಿಪ್ತ ಸ್ಥಿತಿಗತಿ

ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ (ಪಿ.ಎ.ಸಿ) ನಿಯಮಗಳು ಮತ್ತು ಕಾರ್ಯವಿಧಾನದ (ಆಂತರಿಕ ಕಾರ್ಯವಿಧಾನ) ಅನುಸಾರ ಲೆಕ್ಕಪರಿಶೋಧನಾ ವರದಿಯೊಂದನ್ನು ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟಂತಹ ದಿನಾಂಕದಿಂದ ನಾಲ್ಕು ತಿಂಗಳುಗಳೊಳಗೆ ಸರ್ಕಾರದ ಇಲಾಖೆಗಳು ಲೆಕ್ಕಪರಿಶೋಧನಾ ಕಂಡಿಕೆಗಳ ಮೇಲೆ ಸವಿವರ ವಿವರಣೆಗಳನ್ನು (ಇಲಾಖಾ ಟಿಪ್ಪಣಿಗಳು) ಕರ್ನಾಟಕ ವಿಧಾನಸಭಾ ಸಚಿವಾಲಯಕ್ಕೆ ಸಲ್ಲಿಸುವ ಅಗತ್ಯತೆಯಿರುತ್ತದೆ. ಆ ರೀತಿ ಸಲ್ಲಿಸುವ ಮೊದಲು, ಅಂತಹ ಇಲಾಖಾ ಟಿಪ್ಪಣಿಗಳನ್ನು ಮಹಾಲೇಖಾಪಾಲರ ಪರಿಶೀಲನೆಗೆ ಒಳಪಡಿಸಬೇಕೆಂಬುದರ ಅಗತ್ಯತೆಯನ್ನೂ ಸಹ ನಿಯಮಗಳು ಹೊಂದಿರುತ್ತವೆ.

31 ಮಾರ್ಚ್ 2011, 2012, 2013, 2014 ಹಾಗೂ 2015ಕ್ಕೆ ಅಂತ್ಯಗೊಂಡಂತಹ ಸಾಲುಗಳಿಗೆ ಕರ್ನಾಟಕ ಸರ್ಕಾರದ ರಾಜಸ್ವ ವಲಯಕ್ಕೆ ಸಂಬಂಧಿಸಿದಂತೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳಲ್ಲಿ ಸೇರಿಸಲಾಗಿದ್ದಂತಹ 180 ಕಂಡಿಕೆಗಳನ್ನು (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳೂ ಸೇರಿದಂತೆ) ಹಾಗೂ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಗೆ ಸಂಬಂಧಿಸಿದಂತಹ ಒಂದು ಪ್ರತ್ಯೇಕ ವರದಿಯನ್ನು ರಾಜ್ಯ ಶಾಸನ ಸಭೆಯ ಮುಂದೆ ಮಾರ್ಚ್ 2012 ಹಾಗೂ ಮಾರ್ಚ್ 2016ರ ನಡುವಿನ ಅವಧಿಯಲ್ಲಿ ಮಂಡಿಸಲಾಗಿದ್ದಿತು.

ಸೆಪ್ಟಂಬರ್ 2016ರಲ್ಲಿದ್ದಂತೆ, 180 ಕಂಡಿಕೆಗಳ ಪೈಕಿ, 48 ಕಂಡಿಕೆಗಳಿಗೆ ವಾಯಿದೆ ದಿನಾಂಕದ ಒಳಗೆ ಇಲಾಖಾ ಟಿಪ್ಪಣಿಗಳನ್ನು ಸ್ವೀಕರಿಸಲಾಯಿತು. ಆದಾಗ್ಯೂ, 75 ಕಂಡಿಕೆಗಳಿಗೆ ಸಂಬಂಧಿತ ಇಲಾಖೆಗಳಿಂದ ಇಲಾಖಾ ಟಿಪ್ಪಣಿಗಳನ್ನು ಒಂಬತ್ತು ತಿಂಗಳುಗಳ ಸರಾಸರಿ ವಿಳಂಬದೊಂದಿಗೆ ಸ್ವೀಕರಿಸಲಾಯಿತು. ಮುಂದುವರೆದು, ಉಳಿದ 57 ಕಂಡಿಕೆಗಳಿಗೆ ಏಳು ಇಲಾಖೆಗಳಿಂದ (ವಾಣಿಜ್ಯ ತೆರಿಗೆಗಳು, ಭೂ ಕಂದಾಯ, ಮುದ್ರಾಂಕಗಳು ಮತ್ತು ನೋಂದಣಿ, ರಾಜ್ಯ ಅಬಕಾರಿ, ಸಾರಿಗೆ, ಮುಖ್ಯ ವಿದ್ಯುಚ್ಛಕ್ತಿ ಪರೀಕ್ಷಾಧಿಕಾರಿಯವರ ಕಚೇರಿ ಹಾಗೂ ಗಣಿಗಳು ಮತ್ತು ಭೂವಿಜ್ಞಾನ) ಇಲಾಖಾ ಟಿಪ್ಪಣಿಗಳು ಸ್ವೀಕೃತಗೊಂಡಿರುವುದಿಲ್ಲ (ಡಿಸೆಂಬರ್ 2016).

ಇದು, ವಸೂಲಾತಿಯಾಗದೇ ಉಳಿದಿರುವಂತಹ ರಾಜಸ್ವ/ವರಮಾನ ಸಂಗ್ರಹಣೆಗೆ ಸಹಾಯಕವೂ ಆಗಿರುವಂತಹ ಲೆಕ್ಕಪರಿಶೋಧನಾ ವರದಿಗಳಲ್ಲಿ ಎತ್ತಿತೋರಿಸಲಾಗಿರುವಂತಹ ಪ್ರಮುಖ ಅಂಶಗಳ ಬಗ್ಗೆ ಅನುಸರಣಾ ಕ್ರಮಗಳನ್ನು ಕೈಗೊಳ್ಳುವಲ್ಲಿ ಕಾರ್ಯಾಂಗವು ಇನ್ನೂ ಹೆಚ್ಚಿನ ನಿಯಾಮಕ/ನಿಯಂತ್ರಕ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯತೆಯಿರುತ್ತದೆ ಎಂಬುದನ್ನು ಸೂಚಿಸುತ್ತದೆ.

## 1.6 ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳ ಬಗ್ಗೆ ವ್ಯವಹರಿಸುವುದಕ್ಕಾಗಿನ ವ್ಯವಸ್ಥೆಯ ವಿಶ್ಲೇಷಣೆ

ಪರೀಕ್ಷಣಾ ವರದಿಗಳು/ಲೆಕ್ಕಪರಿಶೋಧನಾ ವರದಿಗಳಲ್ಲಿ ಎತ್ತಿ ತೋರಿಸಲಾಗಿರುವಂತಹ ಅಂಶಗಳಿಗೆ ಅನುಸರಣಾ ಕ್ರಮಗಳನ್ನು ಕೈಗೊಳ್ಳುವ ವ್ಯವಸ್ಥೆಯನ್ನು ವಿಶ್ಲೇಷಿಸುವುದಕ್ಕಾಗಿ ಒಂದು ಇಲಾಖೆಗೆ ಸಂಬಂಧಿಸಿದಂತೆ ಕಳೆದ 10 ವರ್ಷಗಳಲ್ಲಿ ನೀಡಲಾದಂತಹ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿದ್ದ ಕಂಡಿಕೆಗಳು ಮತ್ತು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳ ಮೇಲೆ ತೆಗೆದುಕೊಳ್ಳಲಾದ ಕ್ರಮಗಳನ್ನು ಮೌಲ್ಯಮಾಪನ ಮಾಡಲಾಯಿತು ಹಾಗೂ ಈ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲಾಯಿತು.

ಮುಂದಿನ 1.6.1 ಹಾಗೂ 1.6.2 ಕಂಡಿಕೆಗಳು, ಕಳೆದ ಹತ್ತು ವರ್ಷಗಳಲ್ಲಿ ಸ್ಥಳೀಯ ಲೆಕ್ಕಪರಿಶೋಧನೆಯ ಸಮಯದಲ್ಲಿ ಕಂಡುಹಿಡಿಯಲಾಗಿದ್ದಂತಹ ಪ್ರಕರಣಗಳು ಹಾಗೂ ಅಲ್ಲದೆಯೇ 2005–06ರಿಂದ 2014–15 ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲ್ಪಟ್ಟಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಾರಿಗೆ ಇಲಾಖೆಯ[3] ಕಾರ್ಯನಿರ್ವಹಣೆಯನ್ನು ಚರ್ಚಿಸುತ್ತವೆ.

## 1.6.1 ಪರೀಕ್ಷಣಾ ವರದಿಗಳ ಸ್ಥಿತಿಗತಿ

ಕಳೆದ 10 ವರ್ಷಗಳಲ್ಲಿ ನೀಡಲಾದಂತಹ ಪರೀಕ್ಷಣಾ ವರದಿಗಳು, ಈ ವರದಿಗಳಲ್ಲಿ ಸೇರಿಸಲ್ಪಟ್ಟಿರುವ ಕಂಡಿಕೆಗಳು ಹಾಗೂ 31 ಮಾರ್ಚ್ 2016ರಲ್ಲಿ ಅವುಗಳ ಸ್ಥಿತಿಗತಿಯ ಒಂದು ಸಂಕ್ಷಿಪ್ತ ಚಿತ್ರಣವನ್ನು ಕೆಳಗಿನ **ಕೋಷ್ಟಕ 1.6.1**ರಲ್ಲಿ ಅಂಕಣಪಟ್ಟಿಯನ್ನು ಮಾಡಲಾಗಿದೆ.

**ಕೋಷ್ಟಕ 1.6.1**
**ಪರೀಕ್ಷಣಾ ವರದಿಗಳ ಸ್ಥಿತಿಗತಿ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವರ್ಷ | ಪ್ರಾರಂಭಿಕ ಶಿಲ್ಕು | | | ಪ್ರಸಕ್ತ ಸಾಲಿನಲ್ಲಿನ ಸೇರ್ಪಡೆ | | | ಪ್ರಸಕ್ತ ಸಾಲಿನಲ್ಲಿ ಇತ್ಯರ್ಥಗೊಂಡಿದ್ದು | | | ಅಂತಿಮ ಶಿಲ್ಕು | | |
|---|---|---|---|---|---|---|---|---|---|---|---|---|---|
| | | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸು ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸು ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸು ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸು ಮೌಲ್ಯ |
| 1. | 2006-07 | 294 | 301 | 44.66 | 49 | 154 | 4.71 | 55 | 77 | 3.70 | 288 | 378 | 45.66 |
| 2. | 2007-08 | 288 | 378 | 45.66 | 46 | 172 | 10.58 | 36 | 98 | 4.89 | 298 | 452 | 51.36 |
| 3. | 2008-09 | 298 | 452 | 51.36 | 55 | 219 | 32.09 | 45 | 126 | 13.27 | 308 | 545 | 70.18 |
| 4. | 2009-10 | 308 | 545 | 70.18 | 52 | 189 | 14.49 | 39 | 102 | 5.32 | 321 | 632 | 79.35 |
| 5. | 2010-11 | 321 | 632 | 79.35 | 57 | 215 | 74.29 | 24 | 49 | 30.33 | 354 | 798 | 123.31 |
| 6. | 2011-12 | 354 | 798 | 123.31 | 30 | 128 | 2.01 | 22 | 63 | 1.50 | 362 | 863 | 123.82 |
| 7. | 2012-13 | 362 | 863 | 123.82 | 71 | 240 | 8.91 | 27 | 143 | 78.83 | 406 | 960 | 53.90 |
| 8. | 2013-14 | 406 | 960 | 53.90 | 48 | 250 | 20.54 | 24 | 97 | 7.19 | 430 | 1,113 | 67.26 |
| 9. | 2014-15 | 430 | 1,113 | 67.26 | 43 | 81 | 4.26 | 16 | 98 | 25.29 | 457 | 1,096 | 46.22 |
| 10. | 2015-16 | 457 | 1,096 | 46.22 | 35 | 88 | 3.11 | 9 | 46 | 1.48 | 483 | 1,138 | 47.85 |

2015–16 ಸಾಲಿನಲ್ಲಿ ಪರೀಕ್ಷಣಾ ವರದಿಗಳು/ಕಂಡಿಕೆಗಳನ್ನು ಇತ್ಯರ್ಥಗೊಳಿಸುವುದಕ್ಕಾಗಿ ಸಾರಿಗೆ ಇಲಾಖೆಯು ಯಾವುದೇ ಇಲಾಖಾ ಲೆಕ್ಕಪರಿಶೋಧನಾ ಸಮಿತಿಯ ಸಭೆಗಳನ್ನೂ ನಡೆಸಿರಲಿಲ್ಲ.

ಕಚೇರಿಗಳ ನಿಯತಕಾಲಿಕ ಪರೀಕ್ಷಣೆಗಳ ವೇಳೆಯಲ್ಲಿ, ಸ್ಥಳದಲ್ಲಿಯೇ ಅನುಪಾಲನಾ ವರದಿಯನ್ನು ಪಡೆದುಕೊಂಡನಂತರ, ಬಾಕಿ ಇರುವಂತಹ ಪರೀಕ್ಷಣಾ ವರದಿಗಳನ್ನು/ಕಂಡಿಕೆಗಳನ್ನು ಸಮೀಕ್ಷಿಸಲಾಗುವುದು. ಇಲಾಖೆಗಳಿಂದ ಅನುಪಾಲನಾ ವರದಿಯು ಸ್ವೀಕೃತಗೊಂಡ ಕೂಡಲೇ ಪರೀಕ್ಷಣಾ ವರದಿಗಳು/ಕಂಡಿಕೆಗಳನ್ನು ಇತ್ಯರ್ಥಗೊಳಿಸಲಾಗುವುದು.

## 1.6.2 ಒಪ್ಪಿಕೊಳ್ಳಲಾಗಿರುವಂತಹ ಪ್ರಕರಣಗಳಲ್ಲಿ ಮಾಡಲಾಗಿರುವ ವಸೂಲಾತಿ

ಕಳೆದ 10 ವರ್ಷಗಳಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿರುವ ಕಂಡಿಕೆಗಳು, ಅವುಗಳ ಪೈಕಿ ಇಲಾಖೆಗಳು ಒಪ್ಪಿಕೊಂಡಿದ್ದವುಗಳು ಹಾಗೂ ಅವುಗಳಿಗೆ ಪ್ರತಿಯಾಗಿ ವಸೂಲಾತಿ ಮಾಡಲಾಗಿರುವ ಮೊತ್ತ, ಇವುಗಳ ಸ್ಥಿತಿಗತಿಯನ್ನು **ಕಂಡಿಕೆ 1.6.2**ರಲ್ಲಿ ನಮೂದಿಸಲಾಗಿದೆ.

**ಕೋಷ್ಟಕ 1.6.2**
**ಒಪ್ಪಿಕೊಳ್ಳಲಾಗಿರುವಂತಹ ಪ್ರಕರಣಗಳಲ್ಲಿ ಮಾಡಲಾಗಿರುವಂತಹ ವಸೂಲಾತಿ**

**(₹ ಕೋಟಿಯಲ್ಲಿ)**

| ಲೆಕ್ಕಪರಿಶೋಧನಾ ವರದಿಯು ಸಂಬಂಧಿಸಿದ್ದ ವರ್ಷ | ಸೇರ್ಪಡೆಗೊಂಡಿದ್ದ ಕಂಡಿಕೆಗಳ ಸಂಖ್ಯೆ | ಕಂಡಿಕೆಗಳಲ್ಲಿ ಅಡಕವಾಗಿದ್ದ ಹಣಕಾಸಿನ ಮೌಲ್ಯ | ಹಣಕಾಸಿನ ಮೌಲ್ಯವು ಒಳಗೊಂಡಂತೆ ಒಪ್ಪಿಕೊಳ್ಳಲಾಗಿದ್ದ ಕಂಡಿಕೆಗಳ ಸಂಖ್ಯೆ | ಒಪ್ಪಿಕೊಳ್ಳಲಾಗಿದ್ದ ಕಂಡಿಕೆಗಳಲ್ಲಿ ಅಡಕವಾಗಿದ್ದ ಹಣಕಾಸಿನ ಮೌಲ್ಯ | 2015–16 ಸಾಲಿನಲ್ಲಿ ವಸೂಲಾತಿ ಮಾಡಲಾದ ಮೊತ್ತ | 31–03–2016 ರಲ್ಲಿದ್ದಂತೆ ಒಪ್ಪಿಕೊಳ್ಳಲಾದ ಪ್ರಕರಣಗಳಲ್ಲಿ ವಸೂಲಾತಿಯ ಸಂಚಿತ ಸ್ಥಿತಿಗತಿ |
|---|---|---|---|---|---|---|
| 2005-06 | 01 | 0.05 | 01 | 0.32 | - | 0.32 |
| 2006-07 | 03 | 2.00 | 03 | 1.92 | - | 0 |
| 2007-08 | 04 | 1.40 | 04 | 1.39 | - | 0.17 |
| 2008-09 | 04 | 1.35 | 04 | 1.35 | 0.09 | 0.83 |

[3] ರಾಜಸ್ವ/ವರಮಾನ ಶೀರ್ಷಿಕೆ 0041 ಅಡಿಯಲ್ಲಿ.

**(₹ ಕೋಟಿಯಲ್ಲಿ)**

| ಲೆಕ್ಕಪರಿಶೋಧನಾ ವರದಿಯು ಸಂಬಂಧಿಸಿದ್ದ ವರ್ಷ | ಸೇರ್ಪಡೆಗೊಂಡಿದ್ದ ಕಂಡಿಕೆಗಳ ಸಂಖ್ಯೆ | ಕಂಡಿಕೆಗಳಲ್ಲಿ ಅಡಕವಾಗಿದ್ದ ಹಣಕಾಸಿನ ಮೌಲ್ಯ | ಹಣಕಾಸಿನ ಮೌಲ್ಯವು ಒಳಗೊಂಡಂತೆ ಒಪ್ಪಿಕೊಳ್ಳಲಾಗಿದ್ದ ಕಂಡಿಕೆಗಳ ಸಂಖ್ಯೆ | ಒಪ್ಪಿಕೊಳ್ಳಲಾಗಿದ್ದ ಕಂಡಿಕೆಗಳಲ್ಲಿ ಅಡಕವಾಗಿದ್ದ ಹಣಕಾಸಿನ ಮೌಲ್ಯ | 2015-16 ಸಾಲಿನಲ್ಲಿ ವಸೂಲಾತಿ ಮಾಡಲಾದ ಮೊತ್ತ | 31-03-2016 ರಲ್ಲಿದ್ದಂತೆ ಒಪ್ಪಿಕೊಳ್ಳಲಾದ ಪ್ರಕರಣಗಳಲ್ಲಿ ವಸೂಲಾತಿಯ ಸಂಚಿತ ಸ್ಥಿತಿಗತಿ |
|---|---|---|---|---|---|---|
| 2009-10 | 02 | 0.19 | 02 | 0.17 | - | 0.16 |
| 2010-11 | 03 | 0.64 | 02 | 0.30 | - | 0.23 |
| 2011-12 | 03 | 1.20 | 03 | 0.81 | - | 0.43 |
| 2012-13 | 03 | 3.38 | 03 | 3.04 | - | 2.86 |
| 2013-14 | 02 | 1.63 | 02 | 1.63 | 0.08 | 0.55 |
| 2014-15 | 04 | 303.51 | 04 | 292.56 | - | 0 |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, 2005-06ರಿಂದ 2013-14 ಸಾಲುಗಳಿಗೆ ಒಪ್ಪಿಕೊಳ್ಳಲಾಗಿರುವ ಪ್ರಕರಣಗಳಲ್ಲಿ ಇಲಾಖೆಯು ಮಾಡಿರುವಂತಹ ವಸೂಲಾತಿಯು ಶೇಕಡಾ 50.78ರಷ್ಟು ಆಗಿದೆ. ಆದಾಗ್ಯೂ, 2015-16 ಸಾಲಿನಲ್ಲಿ, ಇಲಾಖೆಯು 2008-09 ಮತ್ತು 2013-14 ಸಾಲುಗಳನ್ನು ಹೊರತುಪಡಿಸಿದಂತೆ, ಒಪ್ಪಿಕೊಳ್ಳಲಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಯಾವುದೇ ವಸೂಲಾತಿಯ ಬಗ್ಗೆಯೂ ವರದಿ ಸಲ್ಲಿಸಿರುವುದಿಲ್ಲ. ಒಪ್ಪಿಕೊಳ್ಳಲಾಗಿರುವಂತಹ ಪ್ರಕರಣಗಳಲ್ಲಿ ಒಳಗೊಂಡಿರುವಂತಹ ಬಾಕಿಗಳ ವಸೂಲಾತಿಯ ಕ್ರಮಗಳನ್ನು ಅನುಸರಿಸಲು ಇಲಾಖೆಯು ತತ್‌ಕ್ಷಣದ ಕ್ರಮವನ್ನು ತೆಗೆದುಕೊಳ್ಳಬೇಕು.

## 1.7 ಲೆಕ್ಕಪರಿಶೋಧನೆಯ ಪೂರ್ವಭಾವಿ ಯೋಜನೆ

ವಿವಿಧ ಇಲಾಖೆಗಳ ಅಡಿಯಲ್ಲಿ ಲೆಕ್ಕಪರಿಶೋಧನೆ ಮಾಡಬೇಕಾದಂತಹ ಘಟಕಗಳನ್ನು/ಕಚೇರಿಗಳನ್ನು, ಅವುಗಳ ರಾಜಸ್ವದ ಸ್ಥಿತಿಗತಿ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳ ಹಿಂದಿನ ಪ್ರವೃತ್ತಿ ಮತ್ತು ಇನ್ನಿತರೆ ಪ್ರಮಿತಿಗಳಿಗೆ ತಕ್ಕಂತೆ ಅಧಿಕ, ಮಧ್ಯಮ ಹಾಗೂ ಅಲ್ಪ ಪ್ರಮಾಣದ ಸಂಭಾವ್ಯ ಅಪಾಯಗಳುಳ್ಳ ಸಂಸ್ಥೆಗಳೆಂಬುದಾಗಿ ವರ್ಗೀಕರಿಸಲಾಗುವುದು. ವಾರ್ಷಿಕ ಲೆಕ್ಕಪರಿಶೋಧನಾ ಪೂರ್ವಭಾವಿ ಯೋಜನೆಯನ್ನು, ಇನ್ನಿತರವುಗಳೊಂದಿಗೆ, ಸಂಭಾವ್ಯ ಅಪಾಯದ ಚಿಂತನೆಯನ್ನು ಆಧರಿಸಿದ್ದು, ಅದು ಇನ್ನಿತರವುಗಳೊಂದಿಗೆ, ಸರ್ಕಾರದ ರಾಜಸ್ವ ಮತ್ತು ತೆರಿಗೆ ಆಡಳಿತದಲ್ಲಿ ಪ್ರಮುಖ ವಿಚಾರಗಳು, ಅಂದರೆ ಆಯವ್ಯಯ ಭಾಷಣ, ರಾಜ್ಯದ ಆರ್ಥಿಕ ಸ್ಥಿತಿಗತಿಯ ಮೇಲಿನ ಶ್ವೇತಪತ್ರ, ಹಣಕಾಸು ಆಯೋಗದ (ರಾಜ್ಯ ಮತ್ತು ಕೇಂದ್ರ) ವರದಿಗಳು, ತೆರಿಗೆ ಸುಧಾರಣಾ ಆಯೋಗದ ಶಿಫಾರಸ್ಸುಗಳು, ಕಳೆದ ಐದು ವರ್ಷಗಳಲ್ಲಿನ ಕಂದಾಯ ಗಳಿಕೆಯ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ, ತೆರಿಗೆ ನಿರ್ವಹಣೆಯ ವೈಶಿಷ್ಟ್ಯಗಳು, ಲೆಕ್ಕಪರಿಶೋಧನಾ ವ್ಯಾಪ್ತಿ ಹಾಗೂ ಕಳೆದ ಐದು ವರ್ಷಗಳಲ್ಲಿ ಅದರ ಪ್ರಭಾವ ಇತ್ಯಾದಿಗಳ ಆಧಾರದ ಮೇರೆಗೆ ತಯಾರಿಸಲಾಗುವುದು.

2015-16ರಲ್ಲಿ ಲೆಕ್ಕಪರಿಶೋಧನೆ ಮಾಡಬೇಕಾದಂತಹ 1,227 ಘಟಕಗಳಿದ್ದವು, ಅವುಗಳ ಪೈಕಿ 459 ಘಟಕಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನಾ ಪೂರ್ವಭಾವಿ ಯೋಜನೆಯನ್ನು ತಯಾರಿಸಲಾಯಿತು ಹಾಗೂ 460 ಘಟಕಗಳ ಲೆಕ್ಕಪರಿಶೋಧನೆ ಮಾಡಲಾಯಿತು, ಅವು ಲೆಕ್ಕಪರಿಶೋಧನೆ ಮಾಡಬೇಕಾದ ಒಟ್ಟಾರೆ ಘಟಕಗಳ ಶೇಕಡಾ 37.41ರಷ್ಟು ಆಗುತ್ತವೆ. ವಿವರಗಳನ್ನು **ಕೋಷ್ಟಕ 1.7.1**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 1.7.1**
**ಲೆಕ್ಕಪರಿಶೋಧನೆ ಮಾಡಲಾದ ಘಟಾಕಗಳ ವಿವರಗಳು**

| ಇಲಾಖೆ | ಘಟಕ/ಕಚೇರಿಗಳ ಸಂಖ್ಯೆ | | |
|---|---|---|---|
| | 2015-16 ಸಾಲಿನಲ್ಲಿ ಲೆಕ್ಕಪರಿಶೋಧನೆಗೆ ಒಳಪಡಿಸಬೇಕಾಗಿದ್ದ ಘಟಕಗಳು | 2015-16ರಲ್ಲಿ ಲೆಕ್ಕಪರಿಶೋಧನೆಗಾಗಿ ಪೂರ್ವಭಾವಿ ಯೋಜನೆ ಮಾಡಲಾದ ಘಟಕಗಳು | 2015-16ರಲ್ಲಿ ಲೆಕ್ಕಪರಿಶೋಧನೆ ಮಾಡಲಾದ ಘಟಕಗಳು |
| ವಾಣಿಜ್ಯ ತೆರಿಗೆಗಳು | 416 | 152 | 152 |
| ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ | 283 | 102 | 103 |
| ಮೋಟಾರು ವಾಹನಗಳ ಮೇಲಿನ ತೆರಿಗೆಗಳು | 81 | 45 | 45 |
| ಭೂ ಕಂದಾಯ | 253 | 92 | 92 |
| ರಾಜ್ಯ ಅಬಕಾರಿ | 129 | 40 | 40 |
| ಖನಿಜ ಸ್ವೀಕೃತಿಗಳು | 34 | 18 | 18 |
| ಮುಖ್ಯ ವಿದ್ಯುಚ್ಛಕ್ತಿ ಪರೀಕ್ಷಣಾಧಿಕಾರಿಯವರ ಕಾರ್ಯಾಲಯ | 31 | 10 | 10 |
| **ಒಟ್ಟು** | **1,227** | **459** | **460** |

ಮೇಲೆ ತಿಳಿಸಲಾದಂತಹ ಘಟಕಗಳ ಲೆಕ್ಕಪರಿಶೋಧನೆಯಲ್ಲದೆ, 'ಮೋಟಾರು ವಾಹನಗಳ ಇಲಾಖೆಯಲ್ಲಿ ಇಲಾಖಾ ಶಾಸನಬದ್ಧ ಕ್ರಮಗಳ ಕಾರ್ಯವಿಧಾನ', ಇದರ ಮೇಲೆ ಒಂದು ಅನುಪಾಲನಾ ಲೆಕ್ಕಪರಿಶೋಧನೆಯನ್ನು ಮಾಡುವುದರ ಜೊತೆಗೆ, ವಾಣಿಜ್ಯ ತೆರಿಗೆಗಳ ಇಲಾಖೆಯಿಂದ 'ಅಪ್ರಧಾನ ತೆರಿಗೆಗಳ ನಿರ್ವಹಣೆ' ಹಾಗೂ ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಯಿಂದ 'ಮುದ್ರಾಂಕ ಸುಂಕ ಹಾಗೂ ನೋಂದಣಿ ಶುಲ್ಕಗಳ ನಷ್ಟವನ್ನು ತಡೆಯುವುದಕ್ಕಾಗಿ ನಿಯಂತ್ರಣಗಳ ಸಮರ್ಪಕತೆ', ಇವುಗಳ ಮೇಲೆ ಎರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳನ್ನೂ ಸಹ ಕೈಗೊಳ್ಳಲಾಯಿತು

## 1.8 ಲೆಕ್ಕಪರಿಶೋಧನೆಯ ಫಲಿತಾಂಶಗಳು

**ಪ್ರಸಕ್ತ ಸಾಲಿನಲ್ಲಿ ನಡೆಸಲಾದಂತಹ ಸ್ಥಳೀಯ ಲೆಕ್ಕಪರಿಶೋಧನೆಯ ಸ್ಥಿತಿಗತಿ**

ಮೌಲ್ಯ ವರ್ಧಿತ ತೆರಿಗೆ, ರಾಜ್ಯ ಅಬಕಾರಿ, ಮೋಟಾರು ವಾಹನಗಳ ಮೇಲಿನ ತೆರಿಗೆ, ಸರಕುಗಳು ಮತ್ತು ಪ್ರಯಾಣಿಕರು, ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ, ಭೂ ಕಂದಾಯ ಹಾಗೂ ಇತರೆ ಇಲಾಖಾ ಕಚೇರಿಗಳ 460 ಘಟಕಗಳ 2015–16 ಸಾಲಿನಲ್ಲಿ ನಡೆಸಲಾದಂತಹ ದಾಖಲೆಗಳ ಪರೀಕ್ಷಾ ಪರಿಶೀಲನೆಯು 1,385 ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿರುವಂತಹ ಪ್ರಕರಣಗಳಲ್ಲಿ ₹ 1,220.57 ಕೋಟಿ ಒಟ್ಟಾರೆ ರಾಜಸ್ವ/ವರಮಾನವನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿರುವುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿರುವುದು/ರಾಜಸ್ವ/ವರಮಾನದ ನಷ್ಟ, ಇವುಗಳನ್ನು ತೋರಿಸಿಕೊಟ್ಟಿತು. ಪ್ರಸಕ್ತ ಸಾಲಿನಲ್ಲಿ, ಸಂಬಂಧಪಟ್ಟ ಇಲಾಖೆಗಳು 2015–16 ಸಾಲಿನಲ್ಲಿ 276 ಕಂಡಿಕೆಗಳ ಮೂಲಕ ₹ 48.04 ಕೋಟಿ ಮೊತ್ತವು ಒಳಗೊಂಡಂತೆ ಸ್ಪಷ್ಟಪಡಿಸಲಾಗಿದ್ದಂತಹ ಕರನಿರ್ಧಾರಣೆಯನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದುದು ಹಾಗೂ ಇನ್ನಿತರೆ ಲೋಪದೋಷಗಳನ್ನು ಒಪ್ಪಿಕೊಂಡಿದ್ದವು ಹಾಗೂ ಎಂಟು ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿದ್ದಂತಹ ಪ್ರಕರಣಗಳಲ್ಲಿ ₹ 19.76 ಕೋಟಿ ಮೊತ್ತವನ್ನು ವಸೂಲಾತಿ ಮಾಡಿದವು. ಇಲಾಖೆಗಳು 2015–16ರಲ್ಲಿ 840 ಕಂಡಿಕೆಗಳಲ್ಲಿ ಸ್ಪಷ್ಟಪಡಿಸಲಾಗಿದ್ದಂತಹ ₹ 38.78 ಕೋಟಿ ಮೊತ್ತವನ್ನು ವಸೂಲಾತಿ ಮಾಡಿದವು.

## 1.9 ಈ ವರದಿಯ ವ್ಯಾಪ್ತಿ

ಈ ವರದಿಯು, ಮೇಲೆ ಉಲ್ಲೇಖಿಸಲ್ಪಟ್ಟಿರುವಂತೆ ₹ 1,017.45 ಕೋಟಿ ಮೊತ್ತವು ಒಳಗೊಂಡಂತೆ ಎರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಹಾಗೂ ಒಂದು ಅನುಪಾಲನಾ ಲೆಕ್ಕಪರಿಶೋಧನೆಯೂ ಒಳಗೊಂಡಂತೆ ಪ್ರಸ್ತಕ್ತ ಸಾಲಿನ ಸ್ಥಳೀಯ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಹಾಗೂ ಅಲ್ಲದೆಯೇ ಹಿಂದಿನ ಸಾಲುಗಳಲ್ಲಿ ಗಮನಿಸಲಾದಂತಹ (ಆದರೆ ಹಿಂದಿನ ಸಾಲುಗಳ ವರದಿಗಳಲ್ಲಿ ಸೇರಿಸಲು ಸಾಧ್ಯವಾಗದಿದ್ದಂತಹ) ಲೆಕ್ಕಪರಿಶೋಧನಾ ಅಂಶಗಳಿಂದ ಆಯ್ಕೆ ಮಾಡಲಾಗಿರುವ 17 ಕಂಡಿಕೆಗಳನ್ನು ಒಳಗೊಂಡಿದೆ.

ಇಲಾಖೆಗಳು/ಸರ್ಕಾರವು ₹ 33.72 ಕೋಟಿ ಮೊತ್ತವು ಒಳಗೊಂಡಂತೆ ಲೆಕ್ಕಪರಿಶೋಧನೆಯ ಅಭಿಪ್ರಾಯಗಳನ್ನು ಒಪ್ಪಿಕೊಂಡವು ಹಾಗೂ ಅದರ ಪೈಕಿ ₹ 21.07 ಕೋಟಿ ಮೊತ್ತವನ್ನು ವಸೂಲಾತಿ ಮಾಡಿದವು. ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರಗಳು ಸ್ವೀಕೃತಗೊಂಡಿರುವುದಿಲ್ಲ (ಡಿಸೆಂಬರ್ 2016). ಇವುಗಳ ಬಗ್ಗೆ ಮುಂದಿನ II ರಿಂದ VIರವರೆಗಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.